**By Regd.post ack/due**


**KARNATAKA STATE HUMAN RIGHTS COMMISSION**
**4TH Floor, 5th Phase, Multi Storied Buildings, Bangalore - 560001**
**Phone: 080-22392200, Fax: 22392207**


No.HRC/RTI/LAW/119/2022 Dt: 25.10.2022

ಗೆ,
ಇಂದ್ರಕುಮಾರ್ ಶರ್ಮ,
S/o ಲೇ ಬಸವಣ್ಣ,
CTP ನಂ. 19773,
ಕೇಂದ್ರ ಕಾರಾಗೃಹ,
ಮೈಸೂರು-07.

ಮಾನ್ಯರೇ,

ವಿಷಯ: ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ ಅಧಿನಿಯಮ 2005ರಡಿ
ಮಾಹಿತಿ ಒದಗಿಸುವ ಬಗ್ಗೆ.
ಉಲ್ಲೇಖ: ತಮ್ಮ ಅರ್ಜಿ ದಿನಾಂಕ: 10.10.2022.

********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಮಗೆ ತಿಳಿಸುವುದೇನೆಂದರೆ "ಮಾಹಿತಿ ಹಕ್ಕು ಅಧಿನಿಯಮ-2005ರ ನಿಯಮ 14ರ ಪ್ರಕಾರ ಮಾಹಿತಿಯ ಲಿಖಿತ ಕೋರಿಕೆಯು ಒಂದು ವಸ್ತು ವಿಷಯಕ್ಕೆ ಸಂಬಂಧಿಸಿರತಕ್ಕದ್ದು ಮತ್ತು ಅದು ಸಾಮಾನ್ಯವಾಗಿ ಒಂದು ನೂರಾ ಐವತ್ತು ಪದಗಳಿಗೆ ಮೀರತಕ್ಕದಲ್ಲ. ಅರ್ಜಿದಾರನು ಒಂದಕ್ಕಿಂತ ಹೆಚ್ಚಿನ ವಸ್ತು ವಿಷಯಗಳ ಬಗ್ಗೆ ಮಾಹಿತಿ ಕೋರ ಬಯಸಿದ್ದರೆ ಅವನು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಪರಂತು ಸಲ್ಲಿಸಲಾದ ಕೋರಿಕೆಯು ಒಂದಕ್ಕಿಂತ ಹೆಚ್ಚಿನ ವಸ್ತುಗಳಿಗೆ ಸಂಬಂಧಿಸಿದ್ದ ಸಂಧರ್ಭದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ಮೊದಲ ವಸ್ತು ವಿಷಯಕ್ಕೆ ಸಂಬಂಧಿಸಿದ ಕೋರಿಕೆಗೆ ಮಾತ್ರ ಉತ್ತರ ನೀಡತಕ್ಕದ್ದು ಮತ್ತು ಪ್ರತಿ ಇತರ ವಸ್ತು ವಿಷಯಗಳಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವಂತೆ ಅರ್ಜಿದಾರನಿಗೆ ಸಲಹೆ ಮಾಡಬಹುದು".

ಆದ್ದರಿಂದ ತಮ್ಮ ಅರ್ಜಿಯಲ್ಲಿ ಕೋರಿರುವ ಮೊದಲ ಮಾಹಿತಿಯ ಬಗ್ಗೆ ಈ ಕೆಳಕಂಡ ಮಾಹಿತಿಯನ್ನು ಒದಗಿಸಲಾಗಿದೆ.

| ಕ್ರ. ಸಂ | ಅರ್ಜಿಯಲ್ಲಿ ಕೋರಿರುವ ಮಾಹಿತಿ | ಒದಗಿಸಲಾದ ಮಾಹಿತಿ |
|---|---|---|
| 1 | ಅರ್ಜಿದಾರರು ದಿನಾಂಕ 04.07.2022ರಂದು ನೊಂದಣಿ ಅಂಚೆ ಮೂಲಕ ಸಲ್ಲಿಸಿರುವ ದೂರು ಅರ್ಜಿಗೆ ಆಯೋಗ ತೆಗೆದುಕೊಂಡಿರುವ ಕಾನೂನು ಕ್ರಮ | ದಿನಾಂಕ: 04.07.2022ರ ತಮ್ಮ ದೂರನ್ನು ಹೆಚ್.ಆರ್.ಸಿ ಪ್ರಕರಣ ಸಂಖ್ಯೆ: 2295/10/15/22 ಆಗಿ ದಾಖಲಿಸಿಕೊಳ್ಳಲಾಗಿದ್ದು, ಸದರಿ ಪ್ರಕರಣವನ್ನು ಮಾನ್ಯ ಆಯೋಗದ ಸದಸ್ಯರು ದಿನಾಂಕ: 07.07.2022ರಂದು ಪ್ರಕರಣದಲ್ಲಿ ಪೊಲೀಸ್ ಮಹಾನಿರ್ದೇಶಕರು, ಕಾರಾಗೃಹ ಮತ್ತು ತಿದ್ದುಪಡಿ ಸೇವೆಗಳು, ಬೆಂಗಳೂರು ಇವರಿಗೆ, ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸುವಂತೆ ಕೋರಲಾಗಿದ್ದು ಅವರಿಂದ ವರದಿಯನ್ನು ನಿರೀಕ್ಷಿಸಲಾಗುತ್ತಿದೆ. ಪ್ರಕರಣದ ಮುಂದಿನ ದಿನಾಂಕ: 26.12.2022 ಆಗಿರುತ್ತದೆ. ಇದು ತಮ್ಮ ಮಾಹಿತಿಗಾಗಿ. |

ಮುಂದುವರಿದು ಸದರಿ ಅರ್ಜಿಯಲ್ಲಿ ಕೋರಿರುವ ಉಳಿದ ಮಾಹಿತಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಲು ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

25/10

ಸಾರ್ವಜನಿಕ ಮಾಹಿತಿ ಅಧಿಕಾರಿ
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

Rd

27/10

ಪ್ರತಿಯನ್ನು:
ಮುಖ್ಯಅಧೀಕ್ಷಕರು, ಕೇಂದ್ರ ಕಾರಾಗೃಹ, ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ, ಮೈಸೂರು-570007.